ಸದರಿ ಕಾಮಗಾರಿಗಳನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಸಂಪನ್ಮೂಲ ಲಭ್ಯತೆಯ ಅನುಸಾರ ಕೈಗೊಳ್ಳಲಾಗುವುದು.

13ನೇ ವಿಧಾನಸಭೆ 3ನೇ ಅಧಿವೇಶನ

229 ಶ್ರೀಶ್ರೀನಿವಾಸ್. ಎಂ(ಮಂಡ್ಯ)
ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಕೆಶಿಪ್–II ಯೋಜನೆಯಡಿ, ಮೊದಲನೇ ಹಂತದಲ್ಲಿ (ವಿಶ್ವಬ್ಯಾಂಕಿನ ಅನುದಾನ) ಹಿಂದಿನ ಸರಕಾರ ಕೈಗೆತ್ತಿಕೊಳ್ಳಲಾದ ರಸ್ತೆ ಉದ್ದ ಮತ್ತು ಕಾಮಗಾರಿಗಳ ಸಂಖ್ಯೆ ಎಷ್ಟು; (ಕಾಮಗಾರಿವಾರು ವಿವರ ನೀಡುವುದು);

ಕೆಶಿಫ್–2 ರ ಮೊದಲನೇ ಹಂತದಲ್ಲಿ ಹಿಂದಿನ ಸರ್ಕಾರದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಆ) ಈ ರಸ್ತೆಗಳ ಆಯ್ಕೆಯನ್ನು ಯಾವ ಮಾನದಂಡ ಉಪಯೋಗಿಸಿ ಆಯ್ಕೆ ಮಾಡಲಾಗಿದೆ (ವಿವರಗಳನ್ನು ನೀಡುವುದು);

ಕೆಶಿಫ್–2ರ ಯೋಜನೆ ರಸ್ತೆಗಳನ್ನು ವಿಶ್ವಬ್ಯಾಂಕಿನ ಮಾರ್ಗಸೂಚಿ ಅನ್ವಯ ಅಧ್ಯಯನಗಳ ಮೂಲಕ ಆಯ್ಕೆ ಮಾಡಲಾಗಿದೆ. ವಿವರಗಳು ಕೆಳಕಂಡಂತಿವೆ.

ರಸ್ತೆಗಳನ್ನು ಶೇಕಡ 80 ರಷ್ಟು ಆದ್ಯತೆಯನ್ನು ವಾಹನಗಳ ಸಂಚಾರ ಸಾಂಧ್ರತೆಯನ್ನು ಆಧರಿಸಿ ಮತ್ತು ಶೇಕಡ 20 ರಷ್ಟು ಆದ್ಯತೆಯನ್ನು ಪ್ರಾದೇಶಿಕ ಅಸಮಾನತೆ ಪರಿಹಾರಕ್ಕಾಗಿ ರಚಿಸಿರುವ ಡಾ:ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಸೂಚ್ಯಂಕಕ್ಕೆ ನೀಡುವ ಮೂಲಕ ಹಾಗೂ ಅಂತಿಮವಾಗಿ ಕನಿಷ್ಟ ಶೇಕಡ 12 ರಷ್ಟು ಆಂತರಿಕ ಆರ್ಥಿಕ ಪ್ರತಿಫಲ ನೀಡುವ ರಸ್ತೆಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಮಾಡಲಾಗಿದೆ.

ಇ) ಇದರ ಒಟ್ಟು ಅಂದಾಜು ಮೊತ್ತವೆಷ್ಟು; (ಕಾಮಗಾರಿವಾರು ವಿವರ ನೀಡುವುದು);

ಕೆಶಿಫ್–2 ರ ಯೋಜನೆಯ 3411 ಕಿ.ಮೀ.ಗಳ ಅಂದಾಜು ಮೊತ್ತ 9500 ಕೋಟಿ ರೂ.ಎಂದು ಅಂದಾಜಿಸಲಾಗಿದೆ.

ಈ) ಈ ಯೋಜನೆಯಡಿ ಮಂಡ್ಯ–ಕೌಡ್ಲೆ ಹಾಗೂ ಹಾಸನ–ಅರಕಲಗೂಡು ರಸ್ತೆ ಕಾಮಗಾರಿಗಳನ್ನು ಕೈಬಿಡಲಾಗಿರುವುದು ನಿಜವೇ; ಹಾಗಿದ್ದಲ್ಲಿ ಕಾರಣಗಳೇನು;

ಮಂಡ್ಯ–ಕೌಡ್ಲೆ ಹಾಗೂ ಹಾಸನ–ಅರಕಲಗೂಡು ರಸ್ತೆಗಳು ಕೆಶಿಫ್ –2 ಯೋಜನೆಯಡಿಯಲ್ಲಿ 3411 ಕಿ.ಮೀ.ಗಳ ರಸ್ತೆ ಪಟ್ಟಿಯಲ್ಲಿ ಸೇರಿರುತ್ತವೆ.

ಉ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೇಲಿನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು ಹಾಗೂ ಎಂದಿನಿಂದ ತೆಗೆದುಕೊಳ್ಳಲಾಗುವುದು?

ಸದರಿ ಕಾಮಗಾರಿಗಳನ್ನು ಯೋಜನೆಯ ಮುಂದಿನ ಹಂತಗಳಲ್ಲಿ ಆರ್ಥಿಕ ಸಂಪನ್ಮೂಲ ಲಭ್ಯತೆಗೆ ಅನುಸಾರ ಕೈಗೊಳ್ಳಲಾಗುವುದು.

230 ಶ್ರೀ ಬಾಲಕೃಷ್ಣ ಹೆಚ್.ಸಿ(ಮಾಗಡಿ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಅರಣ್ಯ ಪ್ರವಾಸೋದ್ಯಮ ಕೇಂದ್ರದಲ್ಲಿ "ಕೆಂಪೇಗೌಡ ವನಧಾಮ" ಪ್ರಾರಂಭಿಸಲು ಯಾವಾಗ ಅನುಮೋದನೆ ನೀಡಲಾಯಿತು; ಇದರ ರೂಪುರೇಶೆಗಳೇನು?

ಮಾಗಡಿ ತಲ್ಲೂಕಿನಲ್ಲಿರುವ ಸಾವನದುರ್ಗ ಅರಣ್ಯ ಪ್ರವಾಸೋದ್ಯಮ ಕೇಂದ್ರದಲ್ಲಿ "ಕೆಂಪೇಗೌಡ ವನಧಾಮ" ಪ್ರಾರಂಬಿಸಲು ಈ ಹಿಂದೆ 1993–94ನೇ ಸಾಲಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ಇವರು ಯೋಜನೆಯೊಂದನ್ನು ರೂಪಿಸಿದ್ದು, ಸದರಿ ಯೋಜನೆಯು ದಿನಾಂಕ 29.06.1994 ರಿಂದ ಪ್ರಾರಂಭಗೊಂಡಿರುತ್ತದೆ. ಯೋಜನೆಯ ಉದ್ದೇಶಗಳು ಈ ಕೆಳಗಿನಂತಿರುತ್ತವೆ:–

1. ಗ್ರಾಮೀಣ ಭಾಗದ ಜನತೆಯಲ್ಲಿ ಪರಿಸರ ಕುರಿತು ಅರಿವನ್ನು ಮೂಡಿಸುವುದು.
2. ಸಾವನದುರ್ಗ ಬೆಟ್ಟದಲ್ಲಿ ಟ್ರಕ್ಕಿಂಗ್, ಪ್ರಾಕೃತಿಕ ಶಿಬಿರ ಕೈಗೊಳ್ಳಲು ಅವಶ್ಯಕ ಪರಿಸರ ಮೂಡಿಸುವುದು.
3. ಒಂದು ಉತ್ತಮ ಪ್ರವಾಸ ಕೇಂದ್ರವನ್ನಾಗಿ ಮಾಡುವುದು.

ಆ) ಈ ವನಧಾಮದ ಪ್ರಗತಿ ಯಾವ ಹಂತದಲ್ಲಿದೆ;

ಪ್ರಸ್ತುತ 12ನೇ ಆರ್ಥಿಕ ಹಣಕಾಸು ಆಯೋಗದಂತೆ ಪ್ರವಾಸಿಗಳಿಗೆ ಪ್ರವಾಸೋದ್ಯಮ ಸೌಲಭ್ಯ, ಡಾರ್‌ಮೆಟ್ರಿ ನಿರ್ಮಾಣಕ್ಕೆ 50.00 ಲಕ್ಷ ಅನುದಾನ ಕಾಯ್ದಿರಿಸಿದ್ದು ಈ ಕಾಮಗಾರಿಗಳನ್ನು ಅರಣ್ಯ ಇಲಾಖಾ ಮೂಲಕ ಕೈಗೊಳ್ಳಲು ಉದ್ದೇಶಿಸಿದೆ ಎಂದು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯವರು ಅವರ ಪತ್ರದ ದಿನಾಂಕ 23.02.2008ರಲ್ಲಿ ತಿಳಿಸಿರುವ ಮೇರೆಗೆ ಸದರಿ ಅಧಿಕಾರಿಯವರಿಗೆ ದಿನಾಂಕ 24.06.2008ರಲ್ಲಿ ಪತ್ರ ಬರೆದು ಹಣ ಬಿಡುಗಡೆ ಮಾಡಲು ಕೋರಲಾಗಿತ್ತು. ನಂತರ ನಿದೇಶಕರು, ಪ್ರವಾಸೋದ್ಯಮ ಇಲಾಖೆ ಇವರು ದಿನಾಂಕ 19.09.2008ರಲ್ಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಸಲ್ಲಿಸಲು ಕೋರಿದ್ದರ ಮೇರೆಗೆ ಕೆಂಪೇಗೌಡ ವನಧಾಮವನ್ನು ಪುನಶ್ಚೇತನಗೊಳಿಸುವ ಬಗ್ಗೆ ವಲಯ ಅರಣ್ಯಾಧಿಕಾರಿ, ಮಾಗಡಿಯವರ ಸಂಕ್ಷಿಪ್ತ ಯೋಜನೆಯನ್ನು ಸಲ್ಲಿಸಿದ್ದು, ಈ ಯೋಜನೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯವರು ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು